# ಕನಿಷ್ಟ ರಂಧ್ರದ ಹೃದಯ ಶಸ್ತ್ರಚಿಕಿತ್ಸೆ : ಬದುಕಿಗೆ ಮತ್ತೆ ಹೊಸತನ





**ಡಾ|| ಆನಂದ್ ಸುಬ್ರಹ್ಮಣ್ಯಂ**
ಹಿರಿಯ ಹೃದಯ ಶಸ್ತ್ರಚಿಕಿತ್ಸಾ ತಜ್ಞರು
**ಬಿಜಿಎಸ್ ಗ್ಲೋಬಲ್ ಹಾಸ್ಪಿಟಲ್ಸ್**
– ಸೂಪರ್ ಸ್ಪೆಷಾಲಿಟಿ ಕ್ವಾಟರ್ನರಿ ಕೇರ್

ಮೈಸೂರಿನ 25 ವರ್ಷದ ಯುವತಿ. ಬ್ಯಾಂಕ್ ಉದ್ಯೋಗಿ. ಭವಿಷ್ಯದ ಹೊಂಗನಸು ಕಾಣುವ ವಯಸ್ಸು. ಹಲ್ಲಿನ ಸಣ್ಣ ಹುಳುಕು ಕವಾಟಿನ (ವಾಲ್ವ್) ಸೋಂಕಿಗೂ (ಸೋಂಕಿತ ಎಂಡೋಕಾರ್ಡೈಟಿಸ್) ಕಾರಣವಾಗಿತ್ತು. ರಕ್ತ ಮುಂದಕ್ಕೆ ಹರಿಯುವಂತೆ ಮಾಡುವಲ್ಲಿ ನಾಲ್ಕು ಕವಾಟುಗಳು ಪ್ರಮುಖ ಪಾತ್ರವಹಿಸುತ್ತವೆ. ಈ ಪೈಕಿ ಮಿಟ್ರಲ್ ಕವಾಟು ಒಂದು. ಯುವತಿಯ ಇದೇ ಕವಾಟಿಗೆ ಸೋಂಕಾಗಿ ಹಾನಿಯಾಗಿತ್ತು. ಪರಿಣಾಮ ತೀವ್ರ ರಕ್ತ ಸ್ರಾವ ಮತ್ತು ರಕ್ತ ಹೆಪ್ಪುಗಟ್ಟಲು (ವೆಜಿಟೇಷನ್) ಎಡೆಮಾಡಿಕೊಟ್ಟಿತ್ತು. ಇದರಿಂದ ಬಳಲಿ ನಿತ್ರಾಣಳಾದ ಯುವತಿಗೆ ಉಸಿರಾಡಲು ಕಷ್ಟವಾಗಿತ್ತು. ರಕ್ತ ಹೆಪ್ಪುಗಟ್ಟುತ್ತಿದ್ದರೆ, ಅದು ಮಾರಾಣಾಂತಿಕ ಸ್ಟ್ರೋಕ್ ದಾರಿಯಾಗುತ್ತದೆ.

ಇಂತಹ ಸಮಸ್ಯೆಯಿಂದ ಬಳಲುತ್ತಿದ್ದ ಯುವತಿಗೆ ಒಂದೇ ಸಮನೆ ಜ್ವರ ಏರುತ್ತಿತ್ತು. ಜ್ವರಕ್ಕೆ 6 ವಾರಗಳ ಕಾಲ ಆ್ಯಂಟಿಬಯಾಟಿಕ್ಸ್ ನೀಡಿ ಹತೋಟಿಗೆ ತರಲಾಗಿತ್ತು. ಇದಾದ ಬಳಿಕ ಯುವತಿಯ ಕವಾಟನ್ನು ಸರಿಪಡಿಸುವ ಅಗತ್ಯವಿತ್ತು. ಆಕೆ ಹಲವಾರು ಆಸ್ಪತ್ರೆಗಳನ್ನು ಎಡೆತಾಕಿದಳು. ಎಲ್ಲರೂ ಸರಿ ಪಡಿಸಲು ಪ್ರಯತ್ನಿಸುತ್ತೇವೆ. ಇದಕ್ಕಾಗಿ ಸಾಂಪ್ರದಾಯಿಕ ವಿಧಾನ ಮೂಲಕ ಶಸ್ತ್ರಚಿಕಿತ್ಸೆ ಮಾಡಬೇಕು, ಜೊತೆಗೆ, ಹಾಳಾಗಿರುವ ವಾಲ್ವ್ ಅನ್ನು ಬದಲಾಯಿಸಬೇಕು ಎಂದಿದ್ದರು.

ಇದರ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಇಂಟರ್‌ನೆಟ್ ಮೊರೆಹೋದ ಯುವತಿಗೆ ಕವಾಟಿನ ಬದಲಾವಣೆಗಿಂತ ದುರಸ್ತಿಯೇ ಹೆಚ್ಚು ಸೂಕ್ತ ಎನ್ನುವುದು ಅರಿವಾಗಿತ್ತು. ವಾಲ್ವ್ ಬದಲಾವಣೆ ಎಂದರೆ ಹಾಳಾಗಿರುವ ಕವಾಟನ್ನು ಶಸ್ತ್ರಚಿಕಿತ್ಸೆ ಮೂಲಕ ತೆಗೆದು ಅಲ್ಲಿಗೆ ಯಾಂತ್ರೀಕೃತ ವಾಲ್ವ್ ಅನ್ನು ಅಳವಡಿಸಲಾಗುತ್ತದೆ. ಹೀಗೆ ಮಾಡಿದಾಗ ರಕ್ತ ಅಲ್ಲೇ ಹೆಪ್ಪುಗಟ್ಟಬಹುದು ಅಥವಾ ಕವಾಟಿನ ವೈಫಲ್ಯಕ್ಕೂ ಕಾರಣವಾಗಬಹುದು.

ಹೀಗಾಗುವುದನ್ನು ತಡೆಗಟ್ಟಲು ಆಕೆಗೆ ಜೀವನಪರ್ಯಂತ ರಕ್ತವನ್ನು 'ತಿಳಿ'ಗೊಳಿಸುವುದು ಅನಿವಾರ್ಯ. ಪ್ರತಿ ತಿಂಗಳೂ ರಕ್ತ ಪರೀಕ್ಷೆಯನ್ನು ಮಾಡಿಸಿ ರಕ್ತದ ಸಾಂದ್ರತೆಯನ್ನು ಅರಿತುಕೊಳ್ಳಬೇಕು. ನಿರಂತರವಾಗಿ ರಕ್ತವನ್ನು ತಿಳಿಗೊಳಿಸುತ್ತಿದ್ದಲ್ಲಿ ಅದು ಮೂಗಿನಲ್ಲಿ ರಕ್ತಸ್ರಾವಕ್ಕೆ ಇಲ್ಲವೆ ಮೆದುಳಿನ ರಕ್ತಸ್ರಾವಕ್ಕೆ ಕಾರಣವಾಗುತ್ತದೆ.

**ಅಳವಡಿಸಿಕೊಂಡಿರುವ ಆಧುನಿಕ ಜೀವನಶೈಲಿ ಹೃದಯ ರೋಗಕ್ಕೆ ದಾರಿಯಾಗಿದೆ. ಅದರಲ್ಲೂ ಯುವ ಜನರಲ್ಲಿ ಹೃದಯ ರೋಗ ಪ್ರಕರಣಗಳು ಹೆಚ್ಚಾಗುತ್ತಿವೆ. ನಿಜಕ್ಕೂ ಇದು ಆತಂಕದ ಸಂಗತಿ. ಇತ್ತೀಚಿನ ದಿನಗಳಲ್ಲಿ ಹೃದಯ ಶಸ್ತ್ರಚಿಕಿತ್ಸೆ ಸಾಮಾನ್ಯ. ಬದಲಾಗುತ್ತಿರುವ ತಂತ್ರಜ್ಞಾನ ಮತ್ತು ತಂಡದ ರೀತಿಯಲ್ಲಿ ಕಾರ್ಯನಿರ್ವಹಿಸುವ ಸಮರ್ಥ ಹೃದಯ ತಜ್ಞರಿಂದ ಇಂದು ಹೃದಯ ಶಸ್ತ್ರಚಿಕಿತ್ಸೆಗೆ ಅತ್ಯಾಧುನಿಕ ವಿಧಾನಗಳು ಲಭ್ಯವಿದೆ. ಈ ಪೈಕಿ ಕನಿಷ್ಟ ಗಾಯದ ವಿಧಾನ ಮೋಡಿ ಮಾಡಿದೆ.**

ಇನ್ನು ಚಿಕ್ಕ ವಯಸ್ಸು. ಋತುಸ್ರಾವದ ವೇಳೆ ಹೆಚ್ಚಿನ ರಕ್ತಸ್ರಾವಕ್ಕೆ ಕಾರಣವಾಗುವ ಸಾಧ್ಯತೆಗಳನ್ನು ಅಲ್ಲಗೆಳೆಯುವಂತಿಲ್ಲ. ಭವಿಷ್ಯದಲ್ಲಿ ಗರ್ಭ ಧರಿಸಿದಾಗ ಭ್ರೂಣದ ಹಂತದಲ್ಲೇ ಅದು 'ಸಾಯ'ಬಹುದು ಇಲ್ಲವೆ ಪ್ರಸವದ ವೇಳೆ ಹೆಚ್ಚು ರಕ್ತಸ್ರಾವವಾಗಿ ಅದು ಸಾವಿಗೂ ಕಾರಣವಾಗಬಹುದು. ಈ ಎಲ್ಲಾ ಗೊಂದಲಗಳಿಗಿಂತ ನೈಸರ್ಗಿಕ ಕವಾಟನ್ನೇ ದುರಸ್ತಿ ಮಾಡಿಸಿಕೊಂಡು ಅದನ್ನೇ ಉಳಿಸಿಕೊಳ್ಳುವುದು ಆಕೆಗೆ ಹೆಚ್ಚು ಸೂಕ್ತವಾಗಿ ಕಂಡಿತ್ತು.

ಎರಡನೇ ಅಭಿಪ್ರಾಯಕ್ಕಾಗಿ ಆಕೆ ಬೆಂಗಳೂರಿನ ಬಿಜಿಎಸ್ ಗ್ಲೋಬಲ್ ಹಾಸ್ಪಿಟಲ್‌ನ ಹೃದಯ ತಜ್ಞರನ್ನು ಭೇಟಿ ಮಾಡಿದ್ದಳು. ಆಕೆಯನ್ನು ಪರೀಕ್ಷಿಸಿದ ಬಳಿಕ ಆಕೆಯ ವಿವಿಧ ತಪಾಸಣೆಗಳ ವರದಿಗಳನ್ನು ಹಾಗೂ ಎಕೋಕಾರ್ಡಿಯೋಗ್ರಾಮ್ ಅನ್ನು ವಿವರವಾಗಿ ಪರಿಶೀಲಿಸಲಾಯಿತು. ಬಳಿಕ ಆಕೆಗೆ ಕವಾಟನ್ನು ದುರಸ್ತಿ ಪಡಿಸುವ ವಿಶ್ವಾಸವನ್ನು ನೀಡಲಾಯಿತು. ಆಕೆಗೂ ಇದು ನೆಮ್ಮದಿ ತಂದಿತ್ತು. ಇದಾದ ಒಂದು ವಾರದ ಬಳಿಕ ಆಕೆಗೆ ಮಿಟ್ರಲ್ ವಾಲ್ವ್ ದುರಸ್ತಿಗಾಗಿ ಕನಿಷ್ಟ ರಂಧ್ರದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಳು. ಹಾಳಾಗಿದ್ದ ಆಕೆಯ ಕವಾಟಿನ ಮೂರನೇ ಒಂದರಷ್ಟನ್ನು ತೆಗೆದು ಹಾಕಲಾಗಿತ್ತು. ಇದರಿಂದ ಕವಾಟಿನ ನಡುವೆ ದೊಡ್ಡ ಅಂತರ ಉಂಟಾಗಿತ್ತು. ಇದನ್ನು ಪುನರ್ ನಿರ್ಮಿಸುವ ಮೂಲಕ ಅಂತರವನ್ನು ಮುಚ್ಚಲು ಇಡೀ ಹೃದಯವನ್ನು ಮುಚ್ಚುವ ಪದರವನ್ನೇ ಬಳಸಿಕೊಳ್ಳಲು ನಿರ್ಧರಿಸಲಾಗಿತ್ತು. ಅದರಂತೆ ಹೃದಯಾವರಣದ (pericardium) ಭಾಗವನ್ನು ತೆಗೆದು, ಅದನ್ನು ಅಗತ್ಯಕ್ಕೆ ತಕ್ಕದಾದ ಆಕಾರಕ್ಕೆ ಹೊಂದಿಸಿಕೊಂಡು ಇದ್ದ ಅಂತರವನ್ನು ಮುಚ್ಚುವಂತೆ ಅದನ್ನು ಹೊಲೆಯಲಾಗಿತ್ತು. ಹೀಗೆ ಮಾಡುವಾಗ ಸೂಜಿ ಮೊನೆಯಷ್ಟು ತಪ್ಪು ಕೂಡ ಭಾರಿ ಪ್ರಮಾಣದ ಸೋರಿಕೆಗೆ ಕಾರಣವಾಗುತ್ತದೆ. ಇದನ್ನು ತಡೆಯಲು ಹಲವಾರು ಸ್ಪ್ರಿಂಗ್‌ಗಳನ್ನು ಬಳಸಲಾಗಿತ್ತು. ಪ್ಯಾರಚೂಟ್‌ನಂತಿರುವ ವಾಲ್ವ್ ಅನ್ನು ಅದರ ಕಾರ್ಯಚರಣೆಯಂತೆ ಮಾಡಲು ಸಮತೋಲವನ್ನು ಕಾಯ್ದುಕೊಳ್ಳುವುದು ಅಗತ್ಯವಾಗಿತ್ತು. ಮುಖ್ಯ ಅರಿವಳಿಕೆ ತಜ್ಞರು ಟ್ರಾನ್ಸ್ ಎಸ್ಸೋಫಜೆಗಲ್ ಎಕೋ ಮಾಡಿ, ಎಲ್ಲವೂ ಸರಿಯಿದೆ. 'ಯಾವುದೇ ಲೀಕ್ ಇಲ್ಲ ಮತ್ತು ಯಾವುದೇ ಅಡಚಣೆ ಇಲ್ಲ, ಎಲ್ಲಾ ಸರಿ ಇದೆ' ಎಂದು ಘೋಷಿಸಿದ್ದರು. ಆರು ಗಂಟೆಗಳ ಅಗ್ನಿಪರೀಕ್ಷೆಯನ್ನು ಗೆದ್ದು ಬಂದಂತಹ ಸಂಭ್ರಮ ಆಪರೇಷನ್ ಕೊಠಡಿಯೊಳಗಿದ್ದ ಎಲ್ಲರಲ್ಲೂ ಮನೆ ಮಾಡಿತ್ತು. ನಾಲ್ಕು ದಿನಗಳ ಬಳಿಕ ಆಕೆ ನಗುತ್ತಾ ಆಸ್ಪತ್ರೆಯಿಂದ ಮನೆ ಮರಳಿದ್ದಳು.

ಸಾಂಪ್ರದಾಯಿಕ ಶಸ್ತ್ರಚಿಕಿತ್ಸೆಗಿಂತ ಭಿನ್ನವಾಗಿ ಈಕೆಗೆ ಕನಿಷ್ಟ ರಂಧ್ರದ ಶಸ್ತ್ರಚಿಕಿತ್ಸೆಯನ್ನು ಆಯ್ಕೆ ಮಾಡಿಕೊಂಡು ಅತ್ಯಂತ ಕಠಿಣವಾದ ಶಸ್ತ್ರಚಿಕಿತ್ಸೆಯನ್ನು ನೆರವೇರಿಸಲಾಗಿತ್ತು. ಆಕೆಯ ಸ್ತನದ ಕೆಳಗೆ ಎರಡು ಇಂಚಿನಷ್ಟು ಕತ್ತರಿಸಲಾಗಿತ್ತು. ಈ ವಿಧಾನದಲ್ಲಿ ಯಾವುದೇ ಮೂಳೆಗಳನ್ನು ಕತ್ತರಿಸುವುದಿಲ್ಲ. ಹೀಗಾಗಿ, ನೋವು ಸಹ ಕಡಿಮೆ ಮತ್ತು ಕಡಿಮೆ ರಕ್ತಸ್ರಾವ ಮತ್ತು ಸೋಂಕಿಗೆ ಒಳಗಾಗುವ ಸಾಧ್ಯತೆಗಳೂ ಕಡಿಮೆ. ಇವೆಲ್ಲದರ ಜೊತೆಗೆ ಬೇಗನೆ ಗುಣಮುಖರಾಗಬಹುದು.

ಇದೇ ವಿಧಾನದಲ್ಲಿ ಶಸ್ತ್ರಚಿಕಿತ್ಸೆ ಮಾಡಿಕೊಂಡ ಮೈಸೂರಿನ ಯುವತಿ ತನ್ನ ನೈಸರ್ಗಿಕ ಕವಾಟನ್ನು ಉಳಿಸಿಕೊಂಡಿದ್ದಳು. ಜೊತೆಗೆ, ಬಹುಬೇಗನೆ ಗುಣಮುಖಳಾಗಿ ಮೂರು ವಾರಗಳ ಬಳಿಕ ಕೆಲಸಕ್ಕೂ ಮರಳಿದ್ದಳು. ಕತ್ತರಿಸಿದ್ದ ಎರಡು ಇಂಚಿನ ಗಾಯವನ್ನು ಕಾಸ್ಮೆಟಿಕ್ ಚಿಕಿತ್ಸೆ ಮೂಲಕ ಗಾಯದ ಕಲೆಯೂ ಕಾಣಿಸದಂತೆ ಮಾಡಿಸಿಕೊಂಡಿದ್ದಳು. ಎಲ್ಲವನ್ನೂ ಗೆದ್ದ ವಿಶ್ವಾಸ ಅವಳಲ್ಲಿ ಮೂಡಿತ್ತು.